ಆಗುತ್ತದೆ' ಎಂಬ ಅಂತಿಮ ತೀರ್ಮಾನಕ್ಕೆ ಬಂದು ತಮ್ಮ ನಿರ್ಧಾರ ಮತ್ತು ದೈನಂದಿನ ಬದುಕಿನಲ್ಲಿ ನನ್ನ ಮೇಲಿನ ಕಾಳಜಿಯ ನೆರಳೂ ಹಾಯದಂತೆ ಬೇಕಂತಲೇ ಅಂತರ ಕಾಯ್ದುಕೊಂಡಿದ್ದಾರೆಯೇ ಎಂಬ ಅಂಜಿಕೆಯೂ ಆಯ್ತು.

ಬರೀ ಚಿಂತೆಯಲ್ಲಿಯೇ ರಾತ್ರೆಯನ್ನು ಹೇಗೆ ಕಳೆದೆನೋ, ಆಗಾಗ ಅಪ್ಪ ಕೆಮ್ಮುತ್ತಿದ್ದ. ಸೊಕಾಗಿ ಕೆಮ್ಮಿದ್ದೋ ಅಥವಾ ಏನಾದರೂ ಬೇಕಾಗಿ ಕೆಮ್ಮಿದ್ದೋ ಎಂದು ಆಯಿ ಹೇಗೆ ಅರ್ಥ ಮಾಡಿಕೊಳ್ಳುತ್ತಾಳೋ, ದೇವರಿಗೇ ಗೊತ್ತು! ಇದನ್ನೆಲ್ಲಾ ನನ್ನ ತಲೆಗೆ ಕಟ್ಟಿ ಆಯಿ ಇವತ್ತು ಚೆನ್ನೈಗೆ ಹೊರಟು ನಿಂತರೆ ಈ ಜನ್ಮದಲ್ಲಿ ನನ್ನ ಮದುವೆಯಾಗದು. ಆಯಿ ಇಲ್ಲೇ ಇದ್ದಿದ್ದರೆ ಅವಳ ಒತ್ತಾಯ, ಕಟಕಟೆಗಾದರೂ ಮಣಿದು ಒಂದೆರಡು ಕಡೆಗಾದರೂ ನನ್ನ ಜಾತಕ ಕೊಟ್ಟುಬರುತ್ತಿದ್ದ ಚಿಕ್ಕಯ್ಯ.

ಬೆಳಕಿನ್ನೂ ಪೂರ್ತಿ ಹರಿದಿರಲಿಲ್ಲ. ಚಿಕ್ಕಮ್ಮ ಮತ್ತು ಆಯಿ ಅದಾಗಲೇ ಕೊಟ್ಟಿಗೆಗೆ ಹೋಗಿದ್ದರೆ ಮಿಕ್ಕುಳಿದವರೆಲ್ಲಾ ಚಿಂತೆ ಚಿಕಾರಿಲ್ಲದೆ ಗಾಢ ನಿದ್ರೆಯಲ್ಲಿದ್ದರು.

ಜಗುಲಿಗೆ ಹಾಕಿದ ಹೊಡಸಲಿನ ಬೆಂಕಿಯಲ್ಲಿನ್ನೂ ಆಯಿ ದೃಷ್ಟಿ ಬಳಿದು ಹಾಕಿದ ಉಪ್ಪು, ಮೆಣಸಿನ ಘಾಟು ಘಮಗುಡುತ್ತಲೇ ಇತ್ತು. ನನ್ನನ್ನು ಹೊತ್ತು ಬಂದ ಚಿಕ್ಕಯ್ಯನ ಲಟಾರಿ ಸೈಕಲ್ಲು ಇನ್ನೂ ದಣಿವಾರಿಸಿಕೊಳ್ಳುತ್ತಲಿತ್ತು. ನಿನ್ನೆ ರಾತ್ರಿ ಕಾಡಿನ ತುಂಬಾ ಆವರಿಸಿದ್ದ ಕತ್ತಲಿನ್ನೂ ಗಾಢವಾಗಿರುವಾಗಲೇ ಕಿಬ್ಬಳ್ಳಿಯಿಂದ ಐದೂ ಮುಕ್ಕಾಲರ ಯಲ್ಲಾಪುರದ ಬಸ್ಸು ಹಿಡಿಯಲು ನಾನು ಆಯಿಗೂ ಹೇಳದೆ ಹೊರಟುಬಿಟ್ಟೆ.

ಹುಬ್ಬಳ್ಳಿಗೆ ಹೋಗಿ ನೌಕರಿಗೆ ರಾಜೀನಾಮೆ ಕೊಟ್ಟು ಬರುವುದೋ ಅಥವಾ ಕಿಬ್ಬಳ್ಳಿಯ ಸೊಸೈಟಿಗೆ ಬರುವ ಜನರ ಕಣ್ಣಿಗೆ ಮದುವೆಗಿದ್ದೇನೆಂದು ತೋರಿಸಿಕೊಳ್ಳಲು ಸಿಂಗರಿಸಿಕೊಂಡು ಕೆಲಸಕ್ಕೆ ಹೋಗಿ ಹೆಣ್ಣು ನೋಡುವ ಶಾಸ್ತ್ರವನ್ನು ದಿನನಿತ್ಯ ಎದುರಿಸಲಾರೆನೆಂದು ಮನೆಯವರಿಗೆ ಹೇಳಿಬಿಡುವುದೋ ಎಂಬ ಗೊಂದಲದಲ್ಲಿಯೇ ದಾರಿ ಸವೆಯುತ್ತಿತ್ತು. ರಸ್ತೆಯುದ್ದಕ್ಕೂ ಹರಡಿದ್ದ ಘನಘೋರ ಕತ್ತಲೆಯನ್ನು ಭೇದಿಸಲು ಆಗಸದಲ್ಲಿ ಮೂಡುತ್ತಿದ್ದ ಬಳ್ಳಿಮಿಂಚು ಫಳಕ್ಕನೆ ಮೂಡಿ ಮಾಯವಾಗುತ್ತಿತ್ತು. ಹರ್ಪನ ಭವಿಷ್ಯವಾಣಿಯನ್ನೂ ಕಡೆಗಣಿಸಿ ಮಳೆ ಸುರಿಯುವ ಸಾಧ್ಯತೆ ನಿಚ್ಚಳವಾಗಿತ್ತು. ಆಶ್ಚರ್ಯವೆಂದರೆ ನಿನ್ನೆ ಹಿಡಿದ ಹೆದರಿಕೆಯ ಗ್ರಹಣ ಇವತ್ತು ನನ್ನ ಬಳಿಯಲ್ಲೆಲ್ಲೂ ಸುಳಿಯಲಿಲ್ಲ. ಕೋಟಿಯಂತೆ ಪ್ರೀತಿಸುವ ಗಂಡಸು ನನ್ನ ಜೀವನದಲ್ಲಿ ಬರುವವರೆಗೂ ಯಾವ ಕರಡಿಯೂ ನನ್ನನ್ನು ಮುಟ್ಟುವ ಧೈರ್ಯ ಕೂಡ ಮಾಡಲಾರದು ಎಂಬ ಹುಂಬು ನಂಬಿಕೆ ನನ್ನನ್ನು ಮತ್ತೆ ಕನಸಿನ ಕೂಪಕ್ಕೆ ತಳ್ಳಿ, ಎಂದೂ ಇಲ್ಲದ ಹುರುಪು ನನ್ನ ನಡಿಗೆಯನ್ನಾವರಿಸಿದಂತೆ ಗೊಂದಲವನ್ನೂ ಮೀರಿ ಇಡುತ್ತಿದ್ದ ಪ್ರತೀ ಹೆಜ್ಜೆ ಹಗುರವಾಗತೊಡಗಿತ್ತು.

**ಛಾಯಾ ಭಟ್**

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.